ಅಂಕೋಲ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿ ಯೋಜನೆಯಂ ಕಾರ್ಯಗತ

೬೯. ಶ್ರೀ ಉಮೇಶ್ ಭಟ್ (ಅಂಕೋಲಾ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳಿಗೆ ದೀಪಗಳನ್ನು ಒದಗಿಸಲಾಗಿದೆ;

ಆ) ಈ ಯೋಜನೆಯನ್ನು ಜಾರಿಗೊಳಿಸುವಾಗ ಅಂಕೋಲಾದಲ್ಲಿ ರಾಜಕೀಯ ಪಕ್ಷಪಾತ ನಡೆದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇಲ್ಲದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೂಲಂಕುಷ ತನಿಖೆ ನಡೆಸಿ ಅರ್ಹತೆಯುಳ್ಳ ಎಲ್ಲಾ ಕುಟುಂಬಗಳಿಗೆ ದೀಪ ಒದಗಿಸುವ ಕೆಲಸವನ್ನು ಸರ್ಕಾರ ತ್ವರಿತವಾಗಿ ಮಾಡುತ್ತದೆಯೇ ಹಾಗೂ ಇದನ್ನು ಎಷ್ಟು ಸಮಯದಲ್ಲಿ ಮಾಡಲಾಗುವುದು ;

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ೧೨೬೭ ಮನೆಗಳು (೩೧–೩–೧೯೯೦ರ ಅಂತ್ಯದ ವೇಳೆಗೆ)

ಆ) ಇಲ್ಲ.

ಇ) 'ಅ' ನಲ್ಲಿನ ಉತ್ತರದಿಂದ ತನಿಖೆ ನಡೆಸುವ ವಿಚಾರ ಉದ್ಭವಿಸುವುದಿಲ್ಲ.

ಮುಂಡರಗಿ ತಾಲ್ಲೂಕಿನ ರೇಷ್ಮೆ ಫಾರಂ

೬೧. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ರೇಷ್ಮೆ ಫಾರಂ ಇರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿಯವರೆಗೆ ರೇಷ್ಮೆ ಫಾರಂಗೆ ನೀರಿನ ಕೊರತೆ ಆದದ್ದು ಸರ್ಕಾರದ ಗಮನಕ್ಕೆ ಬರದಿರಲು ಕಾರಣಗಳೇನು ?

ಇ) ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು).—

ಅ) ತಿಳಿದಿದೆ.

ಆ) ಗಮನಕ್ಕೆ ಬಂದಿದೆ.

ಇ) ಧಾರವಾಡ ಜಿಲ್ಲಾ ಪರಿಷತ್ತು ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಳನ್ನು ಇನ್ನು ಆಳಕ್ಕೆ ಇಳಿಸಲು ಹಾಗೂ ಹೊಸದಾಗಿ ಬೇರೆ ಸ್ಥಳಗಳನ್ನು ಆಯ್ಕೆ ಮಾಡಿ ಕೊಳವೆ ಬಾವಿ ತೆಗೆದು ಪಂಪು ಅಳವಡಿಸಲು ಕಾರ್ಯಕ್ರಮ ಹಾಕಿಕೊಂಡಿದೆ. ಇವುಗಳನ್ನು ಬೇಗನೆ ಕಾರ್ಯಗತ ಮಾಡಲಾಗುವುದು.

ಕಪ್ಪು ಹಲಗೆ ಯೋಜನೆ ಅಡಿ ಪ್ರಾರಂಭವಾದ ಶಾಲಾ ಕಟ್ಟಡಗಳು

೫೮. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆ ಅಡಿ ಪ್ರಾರಂಭವಾದ ಕಟ್ಟಡಗಳಲ್ಲಿ ಅಪೂರ್ಣ ಹಂತಕ್ಕೆ ನಿಂತ ಶಾಲಾ ಕಟ್ಟಡಗಳು ಯಾವುವು, ಅರ್ಧಕ್ಕೆ ನಿಲ್ಲಲು ಕಾರಣಗಳೇನು ? ಇವುಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನು ?

ಆ) ಮುಂಡರಗಿ ನಗರಸಭೆ ಹದ್ದಿನಲ್ಲಿಯ ಶಾಲೆಗಳ ಕೊಠಡಿಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?